**ಅ. ದಾ. ಸಂ. : 202/2016**
**ಪಿ.ಡಬ್ಲ್ಯೂ : 01**

ದಿನಾಂಕ : **26.07.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲು :- 6 ನೇ ಪ್ರತಿವಾದಿಯ ಪರ ಶ್ರೀ. ಎಂ ಹೆಚ್ ?ವಿ. ವಕೀಲರಿಂದ :-**

6 ನೇ ಪ್ರತಿವಾದಿಯು ಸಲ್ಲಿಸಿದ ಪ್ರತಿವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ 6 ನೇ ಪ್ರತಿವಾದಿ ಹಾಗೂ ಅವರ ಕುಟುಂಬಕ್ಕೆ ಸಂಬಂಧಪಟ್ಟ ಸ್ವತ್ತುಗಳ ದಾಖಲಾತಿಗಳನ್ನು ನೋಡಿರುತ್ತೀರಾ ಎಂದರೆ ಸಾಕ್ಷಿಯು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ದಾವಾಸ್ವತ್ತುಗಳು ಸದರಿ 6 ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸಾಕ್ಷಿಯು ಸದರಿ 6 ನೇ ಪ್ರತಿವಾದಿಯ ತಾತರವರು ಕ್ರಯಕ್ಕೆ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ–1 ರ ಕರಾರುಪತ್ರ ಆಗುವ ಸಮಯದಲ್ಲಿ 6 ನೇ ಪ್ರತಿವಾದಿಯು ಅಪ್ರಾಪ್ತ ವಯಸ್ಕರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಾವಾಸ್ವತ್ತು ಪಿತ್ರಾರ್ಜಿತ ಸ್ವತ್ತು ಆದ್ದರಿಂದ ಸದರಿ 6 ನೇ ಪ್ರತಿವಾದಿಗೂ ದಾವಾಸ್ವತ್ತಿನಲ್ಲಿ ಹಕ್ಕು ಇದೆ ಎಂದರೆ ಸಾಕ್ಷಿ ಅವರ ತಂದೆಯೇ ಎಲ್ಲಾ ವಹಿಸಿಕೊಂಡಿದ್ದರು ಎಂದು ನುಡಿಯುತ್ತಾರೆ. ದಾವಾಸ್ವತ್ತು 6 ನೇ ಪ್ರತಿವಾದಿಯ ಪಿತ್ರಾರ್ಜಿತ ಸ್ವತ್ತು ಆದದರಿಂ ದಯಾವುದೇ ಕರಾರುಪತ್ರ ಬರೆದುಕೊಡಲು ವೈಯಕ್ತಿಕ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿಯು ಅವರ ತಂದೆಯೇ ಮೈನರ್ ಗಾರ್ಡಿಯನ್ನು ಆಗಿ ವಹಿಸಿಕೊರಾಡು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 6 ನೇ ಪ್ರತಿವಾದಿಯು ಅಪ್ರಾಪ್ತನಿದ್ದ ಕಾರಣ ಸದರಿಯವರ ಹಕ್ಕನ್ನು ವಂಚಿಸಲು ಸುಳ್ಳು ಕರಾರುಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ 6 ನೇ ಪ್ರತಿವಾದಿಯು ಅಪ್ರಾಪ್ತನಿದ್ದ ಕಾರಣ ನಿಪಿ–1

ರ ಸೃಷ್ಟಿತ ಕರಾರುಪತ್ರಕ್ಕೆ ಯಾವುದೇ ಕಾನೂನಿನ ಮಾನ್ಯತೆ ಇರುವುದಿಲ್ಲ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಸಾಕ್ಷ್ಯ ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್? ಸಿ. ಮಾಗಡಿ.**